

ಶತ್ರುರಾಷ್ಟ್ರಗಳ ಅರೆಸೇನಾಪಡೆ, ಉಗ್ರರೊಂದಿಗೆ ಹೋರಾಟ ನಡೆಸುತ್ತದೆ.

- ಯುದ್ಧದ ಸಂದರ್ಭದಲ್ಲಿ ಸೇನೆಯ ಪರವಾಗಿ ಗೂಢಾಚಾರಿಕೆ ನಡೆಸುತ್ತದೆ. ಅಗತ್ಯವಿದ್ದಾಗ ದಾಳಿಗಳನ್ನು ನಡೆಸುತ್ತದೆ.
- ನಮ್ಮ ಸೇನೆ ವಶಪಡಿಸಿಕೊಳ್ಳುವ ಶತ್ರು ನೆಲೆಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಬೇಕಾದ ಹೊಣೆ ಬಿಎಸ್‌ಎಫ್ ಮೇಲಿರುತ್ತದೆ.
- ಯುದ್ಧ ಕೈದಿಗಳ ರಕ್ಷಣೆಯ ಹೊಣೆ ಹಾಗೂ ನಿರಾಶ್ರಿತರನ್ನು ನಿಯಂತ್ರಿಸಬೇಕಾದ ಕಾರ್ಯಭಾರವನ್ನು ನಿರ್ವಹಿಸುತ್ತದೆ.
- ಸೂಕ್ಷ್ಮ ಸ್ಥಳಗಳಲ್ಲಿ ಗಡಿ ನುಸುಳುಕೋರರನ್ನು ಕಂಡುಹಿಡಿಯಬೇಕಾದ ಕಾರ್ಯವನ್ನು ಬಿಎಸ್‌ಎಫ್ ಜಾಗರೂಕತೆಯಿಂದ ನಿರ್ವಹಿಸುತ್ತಿದೆ.

## ಬಿಎಸ್‌ಎಫ್ ಹಿರಿಮೆ

ಬಿಎಸ್‌ಎಫ್‌ನ ಆಯ್ದ ಯೋಧರು ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಗಳಲ್ಲಿ ಕಾರ್ಯನಿರ್ವಹಿಸಲು ನಿಯೋಜನೆಗೊಳ್ಳುತ್ತಾರೆ.

1999ರ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಬಿಎಸ್‌ಎಫ್ ಪರ್ವತ ಪ್ರದೇಶಗಳಲ್ಲಿ ಸೇನೆಯೊಂದಿಗೆ ದೇಶ ರಕ್ಷಣೆಯ ಕಾರ್ಯ ಕೂಡ ನಿರ್ವಹಿಸಿತ್ತು. ಸೇನೆಗೆ ಬೇಕಾದ ಹೆಚ್ಚುವರಿ ಆಯುಧಗಳ ಸಂಗ್ರಹ ಮತ್ತು ಅವನ್ನು ಒದಗಿಸುವ ಮಹತ್ವದ ಕಾರ್ಯವನ್ನು ಬಿಎಸ್‌ಎಫ್ ನಿರ್ವಹಿಸಿತ್ತು.

ಗುಜರಾತ್ ರಾಜ್ಯದಲ್ಲಿ 2001ರ ಜನವರಿ 26ರಂದು ಭೀಕರ ಭೂಕಂಪ ಸಂಭವಿಸಿದಾಗ ಸಂತ್ರಸ್ತರ ನೆರವಿಗೆ ಬಿಎಸ್‌ಎಫ್ ಧಾವಿಸಿ ಬಂದಿತ್ತು. ಪ್ರಕೃತಿ ವಿಕೋಪದ ಸಂದರ್ಭಗಳಲ್ಲಿ ಬಿಎಸ್‌ಎಫ್, ರಕ್ಷಣಾ ಕಾರ್ಯಗಳಲ್ಲಿ ತನ್ನ ಕಾರ್ಯತತ್ಪರತೆ ಮೆರೆದಿದೆ. ದೇಶದಲ್ಲಿ ಕೋಮುಗಲಭೆ ಅಥವಾ ಶಾಂತಿ ಕದಡುವ ಸಂದರ್ಭಗಳು ಉದ್ಭವಿಸಿದಾಗ ಬಿಎಸ್‌ಎಫ್ ಮುಂಚೂಣಿಯಲ್ಲಿ ನಿಂತು ಶಾಂತಿ ಕಾಪಾಡುವಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ.

ಗಡಿ ಪ್ರದೇಶಗಳಲ್ಲಿ ನಮ್ಮ ಗಡಿಗಳಿಗೆ ಬೇಲಿ ಹಾಕಿಕೊಳ್ಳಲು ಶತ್ರು ಸೇನೆಗಳು ಸದಾ ಅಡ್ಡಿ ಉಂಟುಮಾಡುತ್ತವೆ. ಜಮ್ಮು ಮತ್ತು ಕಾಶ್ಮೀರ ಗಡಿ ಪ್ರದೇಶದಲ್ಲಿ ಗಡಿ ರಕ್ಷಣೆಗಾಗಿ ಬೇಲಿ ಹಾಕುವ ಕಠಿಣ ಸವಾಲಿನ ಕಾರ್ಯದಲ್ಲಿ ಅನೇಕ ಅಡೆತಡೆಗಳ ನಡುವೆಯೂ ಬಿಎಸ್‌ಎಫ್ ತನ್ನ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿತ್ತು.

## ಕಠಿಣ ತರಬೇತಿ

ತುರ್ತು ಸಂದರ್ಭಗಳಲ್ಲಿ ತೆಗೆದುಕೊಳ್ಳಬೇಕಾದ ಸುರಕ್ಷತಾ ಕ್ರಮಗಳ ತರಬೇತಿಗೆ ಬಿಎಸ್‌ಎಫ್ ಹೆಚ್ಚಿನ ಮಹತ್ವ ನೀಡುತ್ತದೆ. ಶಾಂತಿಕಾಲದಲ್ಲಿ ಹೆಚ್ಚು ಬೆವರು ಹರಿಸಿದರೆ ಯುದ್ಧಕಾಲದಲ್ಲಿ



## ಸಾಧನೆಗೆ ಸಲ್ಲುವ ಪದಕಗಳು



ಬಿಎಸ್‌ಎಫ್ ಸಿಬ್ಬಂದಿಗೆ ಮಹಾವೀರ ಚಕ್ರ, ಪರಮ ವಿಶಿಷ್ಟ ಸೇವಾ ಪದಕ, ಕೀರ್ತಿಚಕ್ರ, ವೀರಚಕ್ರ, ಅತಿ ವಿಶಿಷ್ಟ ಸೇವಾ ಪದಕ, ಶೌರ್ಯಚಕ್ರ, ಸೇನಾ ಪದಕ, ವಿಶಿಷ್ಟ ಸೇವಾ ಪದಕ ಮುಂತಾದ ಸೇನಾ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಇವುಗಳೊಂದಿಗೆ ನಾಗರಿಕ ಪ್ರಶಸ್ತಿಗಳಾದ ಪದ್ಮ ಪ್ರಶಸ್ತಿಗಳು, ಪ್ರಧಾನ ಮಂತ್ರಿ ಪದಕ, ಅರ್ಜುನ ಪ್ರಶಸ್ತಿ, ಸಾಹಸ ಪ್ರಶಸ್ತಿ, ಜೀವನ ರಕ್ಷಾ ಪ್ರಶಸ್ತಿಗಳೂ ದೊರೆಯುತ್ತವೆ. ಉತ್ತಮ ಸೇವೆಗಾಗಿ ಪೊಲೀಸ್ ಪದಕಗಳನ್ನೂ ನೀಡಲಾಗುತ್ತದೆ.

ಈವರೆಗೆ 101 ಯೋಧರು ಸೇನಾ ಪದಕಗಳನ್ನೂ, 53 ಯೋಧರು ನಾಗರಿಕ ಪ್ರಶಸ್ತಿಗಳನ್ನೂ ಮತ್ತು 4442 ಯೋಧರು ಪೊಲೀಸ್ ಪದಕಗಳನ್ನು ಗಳಿಸಿದ್ದಾರೆ. 44 ಸಾಹಸಿ ಯೋಧರ ಹೆಸರುಗಳನ್ನು ವರದಿಗಳಲ್ಲಿ ಉಲ್ಲೇಖಿಸಲಾಗಿದೆ. ಇಬ್ಬರು ಯೋಧರು ವಿಶ್ವಸಂಸ್ಥೆಯ ಪದಕಗಳನ್ನು ಪಡೆದಿದ್ದಾರೆ.

ಬಿಎಸ್‌ಎಫ್‌ನಲ್ಲಿ ಅಸಿಸ್ಟೆಂಟ್ ಕಮಾಂಡಂಟ್ ಆಗಿದ್ದ ರಾಮಕೃಷ್ಣ ವಾಧ್ವಾ 1971ರಲ್ಲಿ ಶತ್ರುಗಳು ಆಕ್ರಮಿಸಿದ್ದ ರಾಜಾ ಮೊಹ್ತಾಂ ಎಂಬ ಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಶತ್ರು ಸೇನೆ ಆಕ್ರಮಿಸಿದ ಗಡಿ ಪೋಸ್ಟನ್ನು ವಾಪಾಸ್ ಪಡೆಯುವಲ್ಲಿ ತನ್ನ ಪ್ರಾಣವನ್ನು ಲೆಕ್ಕಿಸದೆ ಇತರ ಯೋಧರನ್ನು ರಕ್ಷಿಸಿದ ಸಾಹಸಕ್ಕಾಗಿ ಮಹಾವೀರಚಕ್ರ ಪದಕ ಪಡೆದ ಬಿಎಸ್‌ಎಫ್‌ನ ಏಕೈಕ ಯೋಧರಾಗಿದ್ದಾರೆ. ಈ ಪ್ರಶಸ್ತಿ ಅವರಿಗೆ ಮರಣೋತ್ತರವಾಗಿ ಸಂದಿದೆ.